
# ಕೆ.ಎನ್. ಗಣೇಶಯ್ಯ



ಚಿತ್ರ: ಡಿ.ಸಿ. ನಾಗೇಶ್

ಕತೆಗಾರ, ಕಾದಂಬರಿಕಾರ

ಕೆ.ಎನ್. ಗಣೇಶಯ್ಯ ಮೂಲತಃ ಕೃಷಿವಿಜ್ಞಾನಿ. ಕೋಲಾರ ಜಿಲ್ಲೆಯವರು. ಇತಿಹಾಸ, ವಿಜ್ಞಾನ ಹಾಗೂ ವರ್ತಮಾನವನ್ನು ತಮ್ಮ ಕೃತಿಗಳಲ್ಲಿ ಬೆಸೆಯುವ ಗಣೇಶಯ್ಯ ಕುತೂಹಲಕಾರಿ ಕಥಾಹಂದರ ಇರುವ ಕತೆ, ಕಾದಂಬರಿಗಳನ್ನು ಬರೆದಿದ್ದಾರೆ. 200ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳು ಮತ್ತು ಆರು ವೈಜ್ಞಾನಿಕ ಪುಸ್ತಕಗಳ ಲೇಖಕ. 'ಶಾಲಭಂಜಿಕೆ', 'ಪದ್ಮಪಾಣಿ', 'ನೇಹಲ', 'ಸಿಗೀರಿಯ', 'ಮಿಹಿರಾ ಕಲ', 'ಕಲ್ದವಸಿ', 'ಪೆರಿನಿ ತಾಂಡವ' (ಕಥಾಸಂಕಲನಗಳು), 'ಕನಕಮುಸುಕು', 'ಕರಿಸಿರಿಯಾನ', 'ಕಪಿಲಿಪಿಸಾರ', 'ಚಿತಾದಂತ', 'ಏಳು ರೊಟ್ಟಿಗಳು', 'ಮೂಕಧಾತು', 'ಶಿಲಾಕುಲ ವಲಸೆ', 'ಬಳ್ಳಿಕಾಳ ಬೆಳ್ಳಿ' (ಕಾದಂಬರಿಗಳು), 'ಭಿನ್ನೋಟ', 'ಭಿನ್ನ ಬಿಂಬ', 'ವಿ–ಚಾರಣ' ಸೇರಿದಂತೆ ಅವರ 18 ಪುಸ್ತಕಗಳು ಪ್ರಕಟವಾಗಿವೆ.

ಸ್ವಾಭಾವಿಕವಾಗಿ ಆಶ್ಚರ್ಯ ಮೂಡಿತ್ತು. ಹಾಗಾಗಿ ಅಂತಹ ಆರ್ಯರ ಸಮುದಾಯವೊಂದು ಇರಲು ಸಾಧ್ಯವಿಲ್ಲ ಎಂಬರ್ಥದಲ್ಲಿ ತಲೆಯಾಡಿಸುತ್ತ ಕೇಳಿದೆ:

"ಬಿಲಾಲ್, ಇಲ್ಲಿರುವವರು ನಿಜವಾದ ಆರ್ಯರು ಎಂದಾದರೆ ವೈದಿಕ ಸಂಸ್ಕೃತಿಯನ್ನು ಪಾಲಿಸುತ್ತಿರುವ ಹಾಗೂ ಅದರ ವಾರಸುದಾರಿಕೆಯ ಜವಾಬ್ದಾರಿ ಹೊತ್ತಿರುವ ಭಾರತದ ಲಕ್ಷಾಂತರ ಜನ ಸುಳ್ಳು ಆರ್ಯರೆ?" ನನ್ನ ಪ್ರಶ್ನೆಯ ಧಾಟಿಯಲ್ಲಿ ಆರ್ಯ ಕಣಿವೆಯ ಬಗ್ಗೆ ನನ್ನ ಅಪನಂಬಿಕೆ ಮತ್ತು ಅನುಮಾನ ಬಿಲಾಲ್‌ಗೆ ಎದ್ದು ಕಾಣುತ್ತಿತ್ತು ಅನಿಸುತ್ತದೆ. ಆತ ಸ್ವಲ್ಪ ಹಿಂಜರಿದಂತೆ ಹೇಳಿದ:

"ಅವರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ಕಷ್ಟವೆ. ಕಾರಣ ಸಾಮಾನ್ಯವಾಗಿ ಯಾರೂ ಆ ಹಳ್ಳಿಗಳತ್ತ ಹೋಗುವುದಿಲ್ಲ."

"ಏಕೆ?"

"ಕಾರ್ಗಿಲ್‌ನಿಂದ ಲೆಹ್‌ಗೆ ಹೋಗುವ ದಾರಿಯಲ್ಲಿ ಮಧ್ಯ ಎಡಕ್ಕೆ ತಿರುಗಿ ಸುಮಾರು 40 ಕಿ.ಮೀ. ನಷ್ಟು ದೂರ ಕ್ರಮಿಸಿದರೆ ಆರ್ಯ ಕಣಿವೆಯ ಹಳ್ಳಿಗಳು ಸಿಗುತ್ತವೆ. ಆದರೆ ಆ ದಾರಿಯಲ್ಲಿ ಹೋಗಲು ಬಹಳ ಸಾಹಸ ಮಾಡಬೇಕು. ಆಕಾಶಕ್ಕೆ ಚಾಚಿ ನಿಂತ ಶಿಲಾಪರ್ವತಗಳ ನಡುವೆ ಕಿರಿದಾದ, ಕಠಿಣವಾದ ಹಾದಿಯಲ್ಲಿ ನಿಧಾನವಾಗಿ ಸಾಗಬೇಕಾಗುತ್ತದೆ. ಎಂತಹ ವಾಹನದಲ್ಲಿ ಸಂಚರಿಸಿದರೂ ಮೈಕೈ ನೋವು ಖಂಡಿತ. ಕೆಲವು ಕಡೆಯಂತೂ ರಸ್ತೆಯ ಮಟ್ಟಕ್ಕೆ ತುಂಬಿ ಹರಿಯುತ್ತಿರುವ ನದಿಯ ನೀರು ಯಾವಾಗ ರಸ್ತೆಯನ್ನೂ ನುಂಗಿಬಿಡುತ್ತದೆಯೋ ಎಂಬ ಹೆದರಿಕೆಯಿಂದಲೆ ಹಲವಾರು ಕಿ.ಮೀ. ದೂರ ನದಿಯಗುಂಟ ಸಾಗಬೇಕು. ಇನ್ನು ನೀವೇ ನೋಡಿದ ಹಾಗೆ ಕಾಶ್ಮೀರದ ಎಲ್ಲ ನದಿಗಳೂ ಅಪ್ಪಟ ಸ್ಫಟಿಕದಂತಹ ನೀರಿನಿಂದ ತುಂಬಿರುವುದಿಲ್ಲ.